







# ರಾಜ್‌ಕೋಟ್ ಆಶ್ರಮ ನಡೆಸಿರುವ ಪರಿಹಾರ ಕಾರ್ಯಗಳು

**1. ತೌಕ್ತೆ ಚಂಡಮಾರುತ ಪರಿಹಾರ ಕಾರ್ಯ**

ತೌಕ್ತೆ ಚಂಕಮಾರುತ ಪರಿಹಾರ ಕಾರ್ಯಗಳ ಅಂಗವಾಗಿ ರಾಜ್‌ಕೋಟ್ ಶ್ರೀರಾಮಕೃಷ್ಣ ಆಶ್ರಮವು ರಾಜ್‌ಕೋಟ್‌ನ ಬಡ ಕುಟುಂಬಗಳಿಗೆ 2021ರ ಮೇ 18ರಂದು 500 ಆಹಾರ ಪ್ಯಾಕೆಟ್‌ಗಳನ್ನು ವಿತರಿಸಿತು. ಭಾವನಗರ ಜಿಲ್ಲೆಯ ರಜುಲ ಪ್ರದೇಶದ ಬಡ ಕುಟುಂಬಗಳಿಗೆ 2021ರ ಮೇ 26ರಂದು 187 ಆಹಾರ ಕಿಟ್‌ಗಳನ್ನು ವಿತರಿಸಿತು. ಈ ಕಿಟ್‌ಗಳಲ್ಲಿ ಅಕ್ಕಿ, ಬೇಳೆ, ಗೋಧಿಹಿಟ್ಟು, ಅಡುಗೆ ತೈಲ, ಸಕ್ಕರೆ, ಚಹಾಪುಡಿ, ವಿವಿಧ ಮಸಾಲೆ ಪದಾರ್ಥಗಳು, ಉಪ್ಪು, ಬಾರ್ ಸೋಪು ಇತ್ಯಾದಿಗಳಿದ್ದವು.

**2. ಕೋವಿಡ್-19 ಪರಿಹಾರ ಕಾರ್ಯ (2 ನೇ ಹಂತ)**

೧) ಆಶ್ರಮವು 2021ರ ಮೇ ತಿಂಗಳಲ್ಲಿ ರಾಜ್‌ಕೋಟ್‌ನ ಬಡ ಕುಟುಂಬಗಳಿಗೆ 191 ಆಹಾರ ಕಿಟ್‌ಗಳನ್ನು, ಅಹಮದಾ ಬಾದ್‌ನಲ್ಲಿ ಬಡ ಕುಟುಂಬಗಳಿಗೆ 185 ಆಹಾರ ಕಿಟ್‌ಗಳನ್ನು, ಸೋಮನಾಥದ ಬಡ ಕುಟುಂಬಗಳಿಗೆ 81 ಆಹಾರ ಕಿಟ್‌ಗಳನ್ನು ಹಾಗೂ ಜುನಾಗಢದ ಬಡ ಕುಟುಂಬಗಳಿಗೆ 27 ಆಹಾರ ಕಿಟ್‌ಗಳನ್ನು ವಿತರಿಸಿತು. ಈ ಕಿಟ್‌ಗಳಲ್ಲಿ ಅಕ್ಕಿ, ಬೇಳೆ, ಗೋಧಿಹಿಟ್ಟು, ಅಡುಗೆ ತೈಲ, ಸಕ್ಕರೆ, ಚಹಾಪುಡಿ, ವಿವಿಧ ಮಸಾಲೆ ಪದಾರ್ಥಗಳು, ಉಪ್ಪು, ಬಾರ್ ಸೋಪು ಇತ್ಯಾದಿಗಳಿದ್ದವು. (ಒಟ್ಟು 484 ಕಿಟ್‌ಗಳು)

೨) ಸೂರತ್ ಜಿಲ್ಲೆಯ ಕಿಮ್ ನಲ್ಲಿರುವ ಆಸ್ಪತ್ರೆಯಲ್ಲಿ ಸುಮಾರು 40 ಮಂದಿ ಕೊರೋನಾ ರೋಗಿಗಳಿಗೆ 2021ರ ಮೇ 1ರಿಂದ ಊಟ, ಹಣ್ಣುಗಳು ಇತ್ಯಾದಿಗಳನ್ನು ನೀಡಲಾಯಿತು. ಮೇ 1ರ ವರೆಗೆ 2490 ಪಲ್ಯಪದಾರ್ಥಗಳನ್ನು ಕೂಡ ಉಚಿತವಾಗಿ ವಿತರಿಸಲಾಯಿತು.

೩) ರಾಜ್‌ಕೋಟ್‌ನ ಪೋಲಿಸ್ ಸಿಬ್ಬಂದಿಗಳಿಗೆ 1800 ಎನ್-95 ಮಾಸ್ಕ್‌ಗಳನ್ನು ಹಂಚಲಾಯಿತು. ರಾಜ್‌ಕೋಟ್‌ನ ಡೆಪ್ಯುಟಿ ಪೋಲಿಸ್ ಕಮಿಶನರ್ ಆದ ಶ್ರೀ ಮನೋಹರ ಸಿಂಹ ಜಡೇಜ ಈ ಮಾಸ್ಕ್‌ಗಳನ್ನು ಪೋಲಿಸ್ ಠಾಣೆಯ ವತಿಯಿಂದ ಸ್ವೀಕರಿಸಿದರು.

೪)ಅಗತ್ಯವಿರುವ ರೋಗಿಗಳಿಗೆ 90 ಸ್ಟೀಮ್ ಇನ್‌ಹೇಲರ್‌ಗಳನ್ನು ವಿತರಿಸಲಾಯಿತು.

೫) ಅಗತ್ಯವಿರುವ ರೋಗಿಗಳ ಉಪಯೋಗಕ್ಕಾಗಿ ಇಲ್ಲಿಯತನಕ 28 ಆಮ್ಲಜನಕ ಸಾಂದ್ರಕಗಳನ್ನು ಉಚಿತವಾಗಿ ನೀಡಲಾಗಿದೆ.

೬) ಅಗತ್ಯವಿರುವ ರೋಗಿಗಳ ಉಪಯೋಗಕ್ಕಾಗಿ 19 ಆಕ್ಸಿಮೀಟರುಗಳನ್ನು ಉಚಿತವಾಗಿ ನೀಡಲಾಗಿದೆ.

೭) ಮಾಂಡವಿ ತಾಲೂಕಿನ ಬಿಡಾಡ ಮತ್ತು ಸಮೀಪದ ಹಳ್ಳಿಗಳಲ್ಲಿ 600 ಮೆಡಿಕಲ್ ಕಿಟ್‌ಗಳನ್ನು ವಿತರಿಸಲಾಗಿದೆ.

೮) ಸ್ವಾಮಿ ವಿವೇಕಾನಂದರ 'ಶಕ್ತಿದಾಯಿ ವಿಚಾರ್' ಪುಸ್ತಕದ ('Thoughts of Power' ಪುಸ್ತಕದ ಗುಜರಾತಿ ಅನುವಾದ) 1,00,000 ಪ್ರತಿಗಳನ್ನು ಕೊರೋನಾ ಯೋಧರಿಗೆ ಹಾಗೂ ರೋಗಿಗಳಿಗೆ ಉಚಿತವಾಗಿ ವಿತರಿಸಲಾಗಿದೆ. ಅವರ ನೈತಿಕ ಸ್ಥೈರ್ಯವನ್ನು ವೃದ್ಧಿಸಲು ಹಾಗೂ ಅವರಿಗೆ ಮಾನಸಿಕ ವಿಶ್ರಾಂತಿ ಒದಗಿಸಲು ಈ ಕೃತಿ ನೆರವಾಗಿದೆ. ರಾಜ್‌ಕೋಟ್ ಮುನ್ಸಿಪಲ್ ಕಾರ್ಪೋರೇಶನ್‌ನ ಸಿವಿಲ್ ಆಸ್ಪತ್ರೆಯ ಹಾಗೂ ಜಾಮ್‌ನಗರದ ಆಯುರ್ವೇದ ವಿಶ್ವವಿದ್ಯಾನಿಲಯದ ಕೊರೋನಾ ಯೋಧರಿಗೆ ಈ ಪುಸ್ತಕದ 19,000 ಪ್ರತಿಗಳನ್ನು ಹಂಚಲಾಗಿದೆ.






Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020